ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/292/2022-2023

ದಿನಾಂಕ 03-04-2023

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 24-03-2023ರಂದು ನಡೆದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:24-03-2023ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ, ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ: 24-04-2023ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

3/4/2023

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 24.03.2023 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ವಿದ್ಯಾ ವಿಷಯಕ ಪರಿಷತ್ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳು.**

**<u>ಸಭೆಯಲ್ಲಿ ಹಾಜರಾಗಿದ್ದ ಸದಸ್ಯರುಗಳು</u>**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಶ್ರೀ ಸಿ.ಎನ್. ಮಂಜೇಗೌಡ ಎಂ.ಎಲ್.ಸಿ – ಸದಸ್ಯರು
3. ಡಾ.ನಿರ್ಮಲ.ಎಚ್.ಎಂ – ಸದಸ್ಯರು
4. ಡಾ. ವೆಂಕಟೇಶಯ್ಯ – ಸದಸ್ಯರು
5. ಡಾ. ಜಯಶಂಕರ್ ಎನ್. – ಸದಸ್ಯರು
6. ಪ್ರೊ.ಸೌಮ್ಯ ಈರಪ್ಪ.ಕೆ – ಸದಸ್ಯರು
7. ಶ್ರೀ ನಂದೀಶ.ಎಸ್ – ಸದಸ್ಯರು
8. ಶ್ರೀ ಟಿ. ನಾಗರಾಜು – ಸದಸ್ಯರು
9. ಡಾ. ಪ್ರಶಾಂತ್ ಎಸ್.ಟಿ. – ಸದಸ್ಯರು
10. ಪ್ರೊ. ಕೆ.ವಿ.ಅಯ್ಯಣ್ಣ – ಸದಸ್ಯರು
11. ಡಾ. ಬಿಂದು ಅನಿಲ್ ಥಾಮಸ್ – ಸದಸ್ಯರು
12. ಶ್ರೀ ಶಿವಕುಮಾರ್.ಎಂ – ಸದಸ್ಯರು
13. ಪ್ರೊ. ಮುಜಾಫರ್ ಹೆಚ್. ಅಸ್ಸಾದಿ – ಸದಸ್ಯರು
14. ಪ್ರೊ. ಹೆಚ್.ಟಿ.ಬಸವರಾಜಪ್ಪ – ಸದಸ್ಯರು
15. ಪ್ರೊ. ಟಿ.ಆರ್. ಮಾರುತಿ – ಸದಸ್ಯರು
16. ಪ್ರೊ. ಎಸ್. ಮದಿಅಳಗನ್ – ಸದಸ್ಯರು
17. ಪ್ರೊ. ಬಿ.ಶಂಕರ್ – ಸದಸ್ಯರು
18. ಪ್ರೊ.ಬಿ.ಮಹಾದೇವಪ್ಪ – ಸದಸ್ಯರು
19. ಪ್ರೊ. ವೈ.ಬಿ. ಬಸವರಾಜು – ಸದಸ್ಯರು
20. ಪ್ರೊ. ಮಲ್ಲಿನಾಥ್ ಕುಂಬಾರ್ – ಸದಸ್ಯರು
21. ಪ್ರೊ. ಜಿ.ಆರ್.ಜನಾರ್ಧನ – ಸದಸ್ಯರು
22. ಪ್ರೊ. ಎಂ.ಎ.ಶ್ರೀಧರ್ – ಸದಸ್ಯರು
23. ಡಾ.ಚಂದ್ರಶೇಖರ್, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ – ಸದಸ್ಯರು
24. ಪ್ರೊ. ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು (ಪ್ರಭಾರ) ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
25. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
26. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
27. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿ – ಸದಸ್ಯರು
28. ಕುಮಾರಿ ಅನುಷಾ.ಪಿ.ಜಿ – ಸದಸ್ಯರು
29. ಕುಮಾರಿ ಮುಸ್ಕನ್ ಭಾನು – ಸದಸ್ಯರು

೩೦. ಶ್ರೀ ರೋಹನ್.ವಿ – ಸದಸ್ಯರು
31. ಕುಮಾರಿ ಅನು.ಎಸ್.ಜೆ – ಸದಸ್ಯರು
೩೨. ಶ್ರೀ ಉದಯ್.ಎಂ.ಎಲ್ – ಸದಸ್ಯರು
೩೩. ಶ್ರೀಮತಿ ವಿ.ಆರ್. ಶೈಲಜ, ಕೆ..ಎ.ಎಸ್,.ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

**ಸಭೆಯಲ್ಲಿ ಗೈರು ಹಾಜರಾಗಿದ್ದವರು**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
   ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ
4. ಶ್ರೀ ಪ್ರೀತಂ ಜೆ. ಗೌಡ, ಎಂ.ಎಲ್.ಎ
5. ಶ್ರೀ ಎಂ.ಶ್ರೀನಿವಾಸ್, ಎಂ.ಎಲ್.ಎ
6. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ
7. ಶ್ರೀ ಎಂ.ಪಿ.ಕುಶಾಲಪ್ಪ, ಎಂ.ಎಲ್.ಸಿ
8. ಡಾ. ಪಿ. ಸರಸ್ವತಿ, ಗ್ರಂಥಪಾಲಕರು
9. ಶ್ರೀಮತಿ ನಾಗರತ್ನಮ್ಮ.ಕೆ
10. ಡಾ. ಜಿ.ಗೋವಿಂದರಾಜು
11. ಶ್ರೀ ಎಸ್.ಹೆಚ್.ಗಂಗೇಗೌಡ
12. ಶ್ರೀ ಹೆಚ್.ಪಿ.ಶಶಿಕುಮಾರ್
13. ಡಾ.ಭಾಗ್ಯಲಕ್ಷ್ಮಿ
14. ನಿರ್ದೇಶಕರು, ಪಿ.ಎಂ.ಇ.ಬಿ
15. ಶ್ರೀ ಎಂ.ಪವನ್ ಕುಮಾರ್

ಮಾನ್ಯ ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಪ್ರೊ.ಎನ್.ಕೆ.ಲೋಕನಾಥ್, ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮುಂದುವರೆದು ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನೇಮಕಗೊಂಡಿರುವ ಪ್ರೊ.ಬಿ.ಮಹಾದೇವಪ್ಪ, ಡೀನರು, ವಾಣಿಜ್ಯ ನಿಕಾಯ, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಹಾಗೂ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರು ಮತ್ತು ಪತ್ರಿಕಾ ಮಾಧ್ಯಮದವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಹಾಗೂ

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ.ಹೆಚ್.ರಾಜಶೇಖರ, ಡೀನರು, ವಾಣಿಜ್ಯ ನಿಕಾಯ, ಮಾನಸಗಂಗೋತ್ರಿ, ಮೈಸೂರು ಹಾಗೂ ಪ್ರೊ. ಮುಝಾಫರ್ ಹೆಚ್ ಅಸ್ಸಾದಿ, ಡೀನರು, ಕಲಾ ನಿಕಾಯ, ಮಾನಸಗಂಗೋತ್ರಿ, ಮೈಸೂರು

ಹಾಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ.ಎನ್.ಕೆ.ಲೋಕನಾಥ್, ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಪ್ರೊ.ಎಂ.ಎಸ್.ಶೇಖರ್, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.

ಮಾನ್ಯ ಕುಲಪತಿಗಳು ಮಾತನಾಡಿ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ತದನಂತರ ಕುಲಸಚಿವರು ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 30-12-2022ರಂದು ಜರುಗಿದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 30-12-2022ರಂದು ಜರುಗಿದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II.1 | ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು, ಇವರಿಂದ ನಡೆಸಲಾಗುವ ಮುಕ್ತ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿ ನೀಡುವ ಬಗ್ಗೆ. |
| ತೀರ್ಮಾನ | ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು, ಇವರು Council of Boards of School Education in India (COBSE) ಇವರಿಂದ ಮಾನ್ಯತೆ ಪಡೆದ ಬಳಿಕ ಷರತ್ತುಬದ್ಧ ಅನುಮತಿಯೊಂದಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿ ನೀಡಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| II.2 | ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಅಳವಡಿಸುವ ಬಗ್ಗೆ. |
| ತೀರ್ಮಾನ | ಉಪ ಸಮಿತಿಯು ಸಲ್ಲಿಸಿರುವ ವರದಿಯಂತೆ ಹಾಗೂ ದಿನಾಂಕ 06-03-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ಕೆಲವೊಂದು ಅಂಶಗಳನ್ನು ಸೇರ್ಪಡೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಅಧಿನಿಯಮದ Section 14ಕ್ಕೆ ಪರಿಷ್ಕರಣೆ ಮಾಡಿ ಸಲ್ಲಿಸಿರುವ ಅಧಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲು ಶಿಕ್ಷಣ ಮಂಡಳಿ ಸಭೆಯು ಶಿಫಾರಸ್ಸು ಮಾಡಿತು. |

| | |
|---|---|
| II.3 | "ಶ್ರೀಮತಿ ಸುಜಾತಮಣಿ ಸಿಂದಘಟ್ಟ ನಾಗರಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| | ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಚಿನ್ನದ ಪದಕ, ನಗದು ಬಹುಮಾನವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ದತ್ತಿ ಸ್ಥಾಪಿಸುವಾಗ ಅತೀ ಹೆಚ್ಚು ಅಂಕಗಳಿಸಿದವರಿಗೆ ಕೊಡಬೇಕು ಎಂದು ಇದೆ ಆದರೆ CBCS Regulation ನಲ್ಲಿ ಚಿನ್ನದ ಪದಕ, ನಗದು ಬಹುಮಾನ ಅಂಕವನ್ನು CGPA ಆಧಾರದ ಮೇಲೆ ನೀಡುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ ಅಂಕಗಳ ಆಧಾರದ ಮೇಲೆ ಚಿನ್ನದ ಪದಕ, ನಗದು ಬಹುಮಾನವನ್ನು ಪರಿಗಣಿಸುವುದು ಸೂಕ್ತ ಎಂದು ಸಭೆಗೆ ತಿಳಿಸಿದರು. ಪ್ರೊ.ಮುಜಾಫರ್ ಅಸ್ಸಾದಿ, ಕಲಾ ನಿಕಾಯದ ಡೀನರು, ಪ್ರೊ.ಬಸವರಾಜಪ್ಪ, ವಿಜ್ಞಾನ ಮತ್ತು ತಂತ್ರಜ್ಞಾನದ ಡೀನರು, ಪ್ರೊ.ಮಹಾದೇವಪ್ಪ, ವಾಣಿಜ್ಯ ನಿಕಾಯದ ಡೀನರು, ಶ್ರೀ ಟಿ. ನಾಗರಾಜು ಹಾಗೂ ಪ್ರೊ.ಕೆ.ವಿ.ಅಯ್ಯಣ್ಣ ಅವರು ಅಂಕಗಳ ಆಧಾರದ ಮೇಲೆ ಪರಿಗಣಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.<br>ಪ್ರೊ.ಎಂ.ಎ.ಶ್ರೀಧರ್ ಅವರು ಮಾತನಾಡಿ ದಾನಿಗಳ ಇಚ್ಛೆಯಂತೆ ಹಾಗೂ ಷರತ್ತುಗಳಂತೆ ನೀಡುವುದು ಇಲ್ಲದೆ ಇದ್ದಲ್ಲಿ ದಾನಿಗಳ ಸಲಹೆಯನ್ನು ಪಡೆಯುವುದು ಅಥವಾ ಸಿಂಡಿಕೇಟ್ ತೀರ್ಮಾನದಂತೆ ನಿರ್ಣಯಿಸುವುದು ಅಥವಾ ಇದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಅಂತಿಮವಾಗಿ ಅಂಕಗಳ ಆಧಾರದ ಮೇಲೆ ಚಿನ್ನದ ಪದಕ ಮತ್ತು ನಗದು ಬಹುಮಾನವನ್ನು ನೀಡಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX)ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.A in Philosophy (ಪ್ರಥಮ ಆದ್ಯತೆ "ಅದ್ವೈತ ಸಿದ್ಧಾಂತ ಆದಿ ಶಂಕರಾಚಾರ್ಯರ ಮೋಕ್ಷ ಹೊಂದುವುದೇ ಮಾನವನ ಮೂಲ ಉದ್ದೇಶ") ಪದವಿ ಪರೀಕ್ಷೆಯಲ್ಲಿ ಮೊದಲನೇ ಬಾರಿಗೆ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀಮತಿ ಸುಜಾತಮಣಿ ಸಿಂದಘಟ್ಟ ನಾಗರಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| II.4 | ದೂರಶಿಕ್ಷಣ ಕಾರ್ಯಕ್ರಮದ ಜನವರಿ 2019, ಜುಲೈ 2019 ಹಾಗೂ ಜನವರಿ 2020ರ ಆವೃತ್ತಿಗಳಲ್ಲಿ ಪ್ರವೇಶಾತಿ ಹೊಂದಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಬೆಸ ಮತ್ತು ಸಮ ಚಾತುರ್ಮಾಸದ ಪುನರಾವರ್ತಿತ ಪರೀಕ್ಷೆಗಳನ್ನು 6 ತಿಂಗಳುಗಳಿಗೆ ಬದಲಾಗಿ 3 ತಿಂಗಳುಗಳಿಗೆ ಒಂದಾವರ್ತಿಯ ಅವಧಿಯಲ್ಲಿ ಪುನರಾವರ್ತಿತ ಪರೀಕ್ಷೆಗಳನ್ನು ನಡೆಸಿ ದೂರಶಿಕ್ಷಣ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಮುಕ್ತಾಯ ಮಾಡುವ ಬಗ್ಗೆ. |

| | |
|---|---|
| **ತೀರ್ಮಾನ** | ದೂರಶಿಕ್ಷಣ ಕಾರ್ಯಕ್ರಮದ ಜನವರಿ 2019, ಜುಲೈ 2019 ಹಾಗೂ ಜನವರಿ 2020ರ ಆವೃತ್ತಿಗಳಲ್ಲಿ ಪ್ರವೇಶಾತಿ ಹೊಂದಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಬೆಸ ಮತ್ತು ಸಮ ಚಾತುರ್ಮಾಸದ ಪುನರಾವರ್ತಿತ ಪರೀಕ್ಷೆಗಳನ್ನು 6 ತಿಂಗಳುಗಳಿಗೆ ಬದಲಾಗಿ 3 ತಿಂಗಳುಗಳಿಗೆ ಒಂದಾವರ್ತಿಯ ಅವಧಿಯಲ್ಲಿ ಪುನರಾವರ್ತಿತ ಪರೀಕ್ಷೆಗಳನ್ನು ನಡೆಸಿ ದೂರಶಿಕ್ಷಣ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಮುಕ್ತಾಯಗೊಳಿಸಲು ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು. |
| II.5 | Directorate of Distance Education Examination Fee Structure for UG/PG Courses. |
| | ಮಾನ್ಯ ಕುಲಸಚಿವರು ಮಾತನಾಡಿ ದೂರಶಿಕ್ಷಣದಲ್ಲಿ 13 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅವರು ವ್ಯಾಸಂಗ ಮುಗಿಸಿದ ಕೂಡಲೇ ದೂರಶಿಕ್ಷಣ ವ್ಯವಸ್ಥೆ ಮುಕ್ತಾಯವಾಗುತ್ತದೆ. ದೂರಶಿಕ್ಷಣ ಪರೀಕ್ಷಾ ಶುಲ್ಕ ರಚನೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.<br>ಶ್ರೀ ಟಿ. ನಾಗರಾಜು ಅವರು ಮಾತನಾಡಿ 13 ವಿದ್ಯಾರ್ಥಿಗಳು ಇರುವುದರಿಂದ ಶುಲ್ಕ ಹೆಚ್ಚಳ ಬೇಡ ಎಂದು ಅಭಿಪ್ರಾಯಪಟ್ಟರು.<br>ಪ್ರೊ. ಮುಜಾಫರ್ ಅಸ್ಸಾದಿ ರವರು ಮಾತನಾಡಿ Specialized Programme ನಲ್ಲಿ ಕನ್ನಡದ ಕಲಿಕೆ ಅಮೇರಿಕದಲ್ಲಿ ಶಿಕ್ಷಣ ಕೊಡುತ್ತಾ ಇದ್ದಾರೆ, ಕನ್ನಡ ಅಕ್ಕ ಸಂಸ್ಥೆಯಿಂದ ಅಲ್ಲಿ ತೆಲುಗು, ತಮಿಳು, ಗುಜರಾತಿ ಎಲ್ಲಾ ಭಾಷೆಗಳಗೂ ಉಚಿತ ಶಿಕ್ಷಣ ನೀಡುತ್ತಿದ್ದಾರೆ ಅದೇ ತರಹ ಕನ್ನಡ ಕಲಿಸಬೇಕು ಅಲ್ಲಿ ಶುಲ್ಕ ರಚನೆ ಪ್ರಕಾರ ರೂ. 12,000/- ಅವರು 100 ಡಾಲರಿಗೆ ಶಿಕ್ಷಣ ನೀಡುತ್ತಾ ಇದ್ದಾರೆ ಅದಕ್ಕೆ ಶುಲ್ಕವನ್ನು ಕಡಿಮೆ ಮಾಡಿ ಕನ್ನಡ ಕಲಿಕೆ ಮಾಡಲಿ ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | The Academic Council ratified the examination fee structure for UG/PG courses (Fresh & Repeaters) of Distance Education. |
| II.6 | ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ-1979ಕ್ಕೆ ತಿದ್ದುಪಡಿ ಮಾಡುವ ಬಗ್ಗೆ. |
| | ಮಾನ್ಯ ಕುಲಸಚಿವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ-1979ಕ್ಕೆ ತಿದ್ದುಪಡಿ ಮಾಡಿ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ರಾಜ್ಯ ಸರ್ಕಾರವು ಪಿಂಚಣಿ ಅಧಿನಿಯಮ 1979ಕ್ಕೆ ಕೆಲವೊಂದು ತಿದ್ದುಪಡಿ ಮಾಡಿ ಮತ್ತೆ ಸಲ್ಲಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಪಿಂಚಣಿ ಅಧಿನಿಯಮ 1979ಕ್ಕೆ ತಿದ್ದುಪಡಿ ಮಾಡಿರುವ ವಿಷಯವನ್ನು ವಿದ್ಯಾ ವಿಷಯಕ ಸಭೆಯ ಗಮನಕ್ಕೆ ತಂದರು.<br>ಇದಕ್ಕೆ ಪೂರಕವಾಗಿ ಪ್ರೊ.ಬಿ.ಮಹಾದೇವಪ್ಪ, ಡೀನರು, ವಾಣಿಜ್ಯ ನಿಕಾಯ, ಇವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ-1979ಕ್ಕೆ ತಿದ್ದುಪಡಿ ಮಾಡಿರುವುದು ಸೂಕ್ತವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ-1979ಕ್ಕೆ ತಿದ್ದುಪಡಿ ಮಾಡಿ ಸಲ್ಲಿಸಿರುವ ಕರಡು ಪಿಂಚಣಿ ಅಧಿನಿಯಮವನ್ನು ರಾಜ್ಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ವಿದ್ಯಾ ವಿಷಯಕ ಸಭೆಯು ಶಿಫಾರಸ್ಸು ಮಾಡಿತು. |

| | |
|---|---|
| II.7 | 2023-2024ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ-1) ಯನ್ನು "ವಿದ್ಯಾ ವಿಷಯಕ ಪರಿಷತ್ತು" ಸಭೆಯ ಅನುಮೋದನೆಗಾಗಿ. |
| | ಮಾನ್ಯ ಹಣಕಾಸು ಅಧಿಕಾರಿಯವರು ಮಾತನಾಡಿ, 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023-24ನೇ ಸಾಲಿನ ಆಯವ್ಯಯದ ಅಂದಾಜುಗಳ "ಕರಡು" ಅನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31 (2) (XV) ರ ಮೇರೆಗೆ ವಿದ್ಯಾ ವಿಷಯಕ ಪರಿಷತ್ ಸಭೆ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲು ನಿರ್ದೇಶಿತನಾಗಿದ್ದೇನೆಂದು ತಿಳಿಸುತ್ತಾ, ಕೆಳಕಂಡ ವಿವರಗಳನ್ನು ಮಂಡಿಸಿದರು.<br>2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದ ಅಂದಾಜುಗಳಲ್ಲಿ ಒಟ್ಟಾರೆ ನಿರೀಕ್ಷಿತ ಆದಾಯ ರೂ.347.16 ಕೋಟಿ ಮತ್ತು ಒಟ್ಟಾರೆ ನಿರೀಕ್ಷಿತ ವೆಚ್ಚ ರೂ.432.56 ಕೋಟಿಗಳಾಗಿದ್ದು, ಒಟ್ಟಾರೆಯಾಗಿ ರೂ.85.40 ಕೋಟಿಗಳ ಕೊರತೆ ಆಯವ್ಯಯ ಅಂದಾಜುಗಳನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.<br>2023-24ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಗಳ ವೇತನ ಭತ್ಯೆಗಳಿಗಾಗಿ ಸರ್ಕಾರವು ರೂ.121,08,00,000/- ಗಳನ್ನು ನಿಗದಿಪಡಿಸಲಾಗಿದ್ದು, ಸರ್ಕಾರವೇ ಹೆಚ್‌ಆರ್‌ಎಂಎಸ್ ಪೋರ್ಟಲ್ ಮುಖಾಂತರ ವೇತನಗಳನ್ನು ಪಾವತಿಸುತ್ತಿದೆ ಎಂದು ತಿಳಿಸಿದರು.<br>2022-23ನೇ ಸಾಲಿನಲ್ಲಿ 1761 ಪಿಂಚಣಿದಾರರಿಗೆ ರೂ.50.00 ಕೋಟಿಗಳನ್ನು ಸರ್ಕಾರವು ಬಿಡುಗಡೆ ಮಾಡಿದ್ದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸುಮಾರು 1841 ಪಿಂಚಣಿ/ಕುಟುಂಬ ಪಿಂಚಣಿದಾರರಿದ್ದು, ಪಿಂಚಣಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. 2022-23 ರಲ್ಲಿ 1780 ಪಿಂಚಣಿದಾರರಿದ್ದು, 2023-24ರಲ್ಲಿ ಪಿಂಚಣಿದಾರರ ಸಂಖ್ಯೆ 1841 ಆಗಲಿದ್ದು, ಪ್ರಸ್ತುತ ಸಾಲಿನಲ್ಲಿ 61 ಉದ್ಯೋಗಿಗಳು (21 ಬೋಧಕರು ಮತ್ತು 40 ಬೋಧಕೇತರರು) ನಿವೃತ್ತರಾಗುತ್ತಿದ್ದಾರೆ. ಆದಕಾರಣ 2023-24ನೇ ಸಾಲಿಗೆ ಪಿಂಚಣಿ ಬಾಬ್ತಿಗಾಗಿ ವೆಚ್ಚ ರೂ.127,62,33,339/- ಗಳನ್ನು ನಿಗಧಿಪಡಿಸಲಾಗಿದೆ, ಆದರೆ ಈಗಲೂ ಸಹ ರಾಜ್ಯ ಸರ್ಕಾರದಿಂದ ರೂ.50.00 ಕೋಟಿಗಳು ಮಾತ್ರವೇ ಬಿಡುಗಡೆಯಾಗಿರುತ್ತದೆ. ಇನ್ನುಳಿದ ಮೊಬಲಗು ರೂ.77,62,33,339/- ಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಆದಾಯದಲ್ಲಿ ಭರಿಸಬೇಕಾಗಿರುತ್ತದೆ ಎಂದು ತಿಳಿಸಿದರು.<br>2022-23ನೇ ಮತ್ತು 2023-24ನೇ ಸಾಲಿನಲ್ಲಿ ಸರ್ಕಾರದಿಂದ ಪಿಂಚಣಿ ಅನುದಾನವಾಗಿ ಕ್ರಮವಾಗಿ ರೂ.56.00 ಕೋಟಿ ಮತ್ತು ರೂ.77.62 ಕೋಟಿಗಳು ಕಡಿಮೆ ನೀಡಿದ ಕಾರಣದಿಂದಾಗಿ, 2023-24ನೇ ಸಾಲಿಗೆ ಕೊರತೆ ಆಯವ್ಯಯವನ್ನು ಮೈಸೂರು ವಿಶ್ವವಿದ್ಯಾನಿಲಯವು ಎದುರಿಸುತ್ತದೆ ಆದರೂ 2023-24ನೇ ಸಾಲಿನ ವೆಚ್ಚಗಳಲ್ಲಿ ಮಿತವ್ಯಯ ಸದಿಸಲು ಕ್ರಮವಹಿಸಲು ಕೋರಲಾಗುವುದು ಮತ್ತು ಅಗತ್ಯ ವೆಚ್ಚಗಳನ್ನು ಹೊರತುಪಡಿಸಿ ಉಳಿದ ವೆಚ್ಚಗಳಿಗೆ ಕಡಿವಾಣ ಹಾಕಲಾಗುವುದೆಂದು ತಿಳಿಸಿದರು. ಮುಂದುವರೆದು, ಪಿಂಚಣಿ ಅನುದಾನವನ್ನು ಹೆಚ್ಚುವರಿಯಾಗಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸಲು ಸೂಕ್ತ ಕ್ರಮವಹಿಸಲಾಗುವುದೆಂದು ತಿಳಿಸಿದರು. |

| | |
|---|---|
| | 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದ ಅಂದಾಜುಗಳಲ್ಲಿ ಒಟ್ಟಾರೆ ನಿರೀಕ್ಷಿತ ಆದಾಯ ರೂ.347.16 ಕೋಟಿ ಮತ್ತು ಒಟ್ಟಾರೆ ನಿರೀಕ್ಷಿತ ವೆಚ್ಚ ರೂ.432.56 ಕೋಟಿಗಳಾಗಿದ್ದು, ಒಟ್ಟಾರೆಯಾಗಿ ರೂ.85.40 ಕೋಟಿಗಳ ಕೊರತೆ ಆಯವ್ಯಯ ಅಂದಾಜನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.<br><br>ಪ್ರೊ.ಮುಜಾಫರ್ ಹೆಚ್ ಅಸ್ಸಾದಿ, ಡೀನರು, ಕಲಾ ನಿಕಾಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಮಾತನಾಡಿ, ಪಿಂಚಣಿ ಹಣ ಸರ್ಕಾರದಿಂದ ಸಮರ್ಪಕವಾಗಿ ಬರುತ್ತಿಲ್ಲ ಹಾಗೂ ಪಿಂಚಣಿದಾರರ ಸಂಖ್ಯೆ ಹೆಚ್ಚಾಗುತ್ತಿದ್ದು, ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲ ಕಡಿಮೆಯಾಗುತ್ತಿದ್ದು, ಜಿಲ್ಲೆಗೊಂದರಂತೆ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿರುವುದರಿಂದ, ಮುಂದಿನ ದಿನಗಳಲ್ಲಿ ಅಧ್ಯಾಪಕೇತರರಿಗೆ ಹಾಗೂ ಅತಿಥಿ ಉಪನ್ಯಾಸಕರಿಗೆ ವೇತನ ನೀಡಲು ಕಷ್ಟವಾಗುವುದರಿಂದ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯವನ್ನು ಕೇಂದ್ರೀಯ ವಿಶ್ವವಿದ್ಯಾನಿಲಯವನ್ನಾಗಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದರು.<br><br>ಪ್ರೊ. ಕೆ.ವಿ.ಅಯ್ಯಣ್ಣರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವನ್ನು ಕೇಂದ್ರೀಯ ವಿಶ್ವವಿದ್ಯಾನಿಲಯವನ್ನಾಗಿ ಮಾಡಿದ್ದಲ್ಲಿ ಭಾರತದಾದ್ಯಂತ ಎಲ್ಲಾ ಕಡೆಯಿಂದಲೂ ವಿದ್ಯಾರ್ಥಿಗಳು ಬಂದು ವ್ಯಾಸಂಗ ಮಾಡಲು ಅನುಕೂಲವಾಗುತ್ತದೆಂದು ತಿಳಿಸಿದರು. ಆದ್ದರಿಂದ ಮಾನ್ಯ ಕುಲಪತಿಗಳು ಸದರಿ ವಿಷಯದ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಿದರು.<br><br>ಶ್ರೀ.ಸಿ.ಎನ್.ಮಂಜೇಗೌಡ, ಎಂ.ಎಲ್.ಸಿ ರವರು ಮಾತನಾಡಿ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರ ನೀಡಬೇಕೆಂದು ತಿಳಿಸಿದರು.<br><br>ಇದಕ್ಕುತ್ತರವಾಗಿ, ಕುಲಸಚಿವರು ಮಾತನಾಡಿ ಬ್ಲಾಕ್- 1 ಮತ್ತು ಬ್ಲಾಕ್- 2 ಸಮಸ್ಯೆಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು. ಪ್ರೊ. ಡಿ. ಆನಂದ, ಇವರ ಅಧ್ಯಕ್ಷತೆಯಲ್ಲಿ, ವಿದ್ಯಾರ್ಥಿ ಪ್ರತಿನಿಧಿಯನ್ನು ಒಳಗೊಂಡಂತೆ ಹಾಗೂ ಕುಲಪತಿಯವರ ಅಧ್ಯಕ್ಷತೆಯಲ್ಲಿ ತಾವು ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿ ಅವರ ಜೊತೆ ಚರ್ಚಿಸಲಾಗಿದೆ ಎಂದು ತಿಳಿಸಿದರು. ಆದರೆ ಬಡವರು, ಹಳ್ಳಿಯವರು, ಶೋಷಿತ ವರ್ಗದವರು ಎಂದು ಹೇಳಿ ಅರ್ಜಿ ಹಾಕಿದವರಿಗೆಲ್ಲಾ ವಿದ್ಯಾರ್ಥಿನಿಲಯ ನೀಡಿ ಎಂದು ಒತ್ತಾಯವಾಯಿತು, ಮುಷ್ಕರವನ್ನು ಸಹ ಮಾಡಿದರು, ಆದರೂ ನಾವು intake ಸಾಮರ್ಥ್ಯ ಏನು ಇದೆಯೋ ಅದನ್ನು ಮೀರಿ ಕಾರ್ಯನಿರ್ವಹಿಸಿದ್ದೇವೆ. ಆಹಾರ ಗುಣಮಟ್ಟದ ಪ್ರಶ್ನೆ ಬಂದಾಗ ಸಮಸ್ಯೆಗಳು ಇರುತ್ತವೆ ಎಂದು ಹೇಳಿದರು.<br><br>ಶ್ರೀ.ಸಿ.ಎನ್ ಮಂಜೇಗೌಡರು, ಎಂ.ಎಲ್.ಸಿ. ಅವರು ಮಾತನಾಡಿ ಮುಂದಿನ ಸಭೆಯಲ್ಲಿ ಇದು ಮತ್ತೆ ಚರ್ಚೆಯಾಗಬಾರದು. ಕಟ್ಟಡಗಳನ್ನು ಎರಡು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಸದರಿ ಕಟ್ಟಡಗಳನ್ನು ಸಂಬಂಧಪಟ್ಟ ವಿಭಾಗಗಳಿಗೆ ಹಸ್ತಾಂತರಿಸುವಂತೆ ತಿಳಿಸಿದರು. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ ಇದು ಕರಡು ಬಜೆಟ್, ಪೂರ್ತಿಯಾಗಿ ಬಜೆಟ್ ಹಂಚಿಕೆಯಾಗಿಲ್ಲ, ಇದಕ್ಕೆ ಸಂಬಂಧಿಸಿದಂತೆ ಪತ್ರವನ್ನು ನೀಡಿದರೆ ಅದನ್ನು ಪರಿಶೀಲಿಸುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಕಾಲಾವಕಾಶ ನೀಡಬೇಕು ತಮಗೆ ಸರಿಯಾದ ಮಾಹಿತಿ ಇಲ್ಲಾ ಕಟ್ಟಡದ ಸಮಿತಿಯಲ್ಲಿ ಏನು ತೀರ್ಮಾನವಾಗಿದೆಯೆಂದು ಪರಿಶೀಲಿಸುವುದಾಗಿ ತಿಳಿಸಿದರು.<br><br>ಶ್ರೀ.ಸಿ.ಎನ್.ಮಂಜೇಗೌಡರು, ಎಂ.ಎಲ್.ಸಿ ಅವರು ಮಾತನಾಡಿ ಪತ್ರವನ್ನೇ ನೀಡಬೇಕಾಗಿಲ್ಲ, ಯಾವುದೇ ಮುಖಾಂತರ ತಿಳಿಸಿದ್ದಲ್ಲಿ ಕಾರ್ಯಗಳು ಪ್ರಗತಿಯಾಗಬೇಕೆಂದು ತಿಳಿಸಿದರು. |
| ತೀರ್ಮಾನ | 2023-2024ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು "ವಿದ್ಯಾವಿಷಯಕ ಪರಿಷತ್ತು" ಸಭೆಯು ಅನುಮೋದಿಸಿತು. |
| II.8 | 2022-23ನೇ ಸಾಲಿನ ಆಯವ್ಯಯವನ್ನು ಪರಿಷ್ಕರಿಸುವ ಬಗ್ಗೆ. |
| | 2022-23ನೇ ಸಾಲಿನ ಆಯವ್ಯಯವನ್ನು ಪರಿಷ್ಕರಣೆ ಮಾಡಲಾಗಿರುವ ವಿವರವನ್ನು ಹಣಕಾಸು ಅಧಿಕಾರಿಯವರು ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು. |
| ತೀರ್ಮಾನ | ವಿಶ್ವವಿದ್ಯಾನಿಲಯದ ವಿಭಾಗ/ಕಛೇರಿಗಳು ಕೋರಿರುವಂತೆ ಅಗತ್ಯಕ್ಕೆ ತಕ್ಕಂತೆ 2022-23ನೇ ಸಾಲಿನ ಅಯವ್ಯಯ ಅಂದಾಜುಗಳಲ್ಲಿ ಪರಿಷ್ಕರಣೆ ಮಾಡಲಾಗಿರುವ ವಿಷಯವನ್ನು ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿರುವುದನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.9 | "Prof.Khyrunnissa Begum Endowment Cash Prize" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX)ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Sc in Food Science and Nutrition Stream-1ನ ಎಲ್ಲಾ ಸೆಮಿಸ್ಟರ್‌ನ ಪರೀಕ್ಷೆಯಲ್ಲಿ 02ನೇ ಅತೀ ಹೆಚ್ಚು ಅಂಕ ಗಳಿಸಿದ ಹಾಗೂ 02ನೇ ರ್‍ಯಾಂಕ್ ಗಳಿಸಿ, ಮೊದಲನೆ ಪ್ರಯತ್ನದಲ್ಲಿ ಉತ್ತೀರ್ಣರಾದಂತಹ ವಿದ್ಯಾರ್ಥಿಗೆ ನಗದು ಬಹುಮಾನನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "Prof.Khyrunnissa Begum Endowment Cash Prize"ದತ್ತಿ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| II.10 | ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದ ಮತ್ತು ಅಧ್ಯಾಪಕೇತರ ವೃಂದದ ನೇಮಕಾತಿ ನಿಯಮಗಳ ಅಧಿನಿಯಮದಲ್ಲಿ ಉಪಕುಲಸಚಿವ ಹುದ್ದೆಯ, ವೇತನ ಶ್ರೇಣಿಯನ್ನು ತಿದ್ದುಪಡಿ ಮಾಡುವ ಬಗ್ಗೆ. |

| | |
|---|---|
| | ಮಾನ್ಯ ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದ ಮತ್ತು ಅಧ್ಯಾಪಕೇತರ ವೃಂದದ ನೇಮಕಾತಿ ನಿಯಮಗಳ ಅಧಿನಿಯಮದಲ್ಲಿ ಉಪಕುಲಸಚಿವ ಹುದ್ದೆಯ ವೇತನ ಶ್ರೇಣಿಗೆ ಸಂಬಂಧಿಸಿದಂತೆ ಈಗಾಗಲೇ ಸದರಿ ಅಧಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡಿದೆ. ಆದರೆ ಉಪಕುಲಸಚಿವ ಹುದ್ದೆಯ ವೇತನ ಶ್ರೇಣಿಯಾದ ರೂ.74400-109600 ಕ್ಕೆ ಸರ್ಕಾರದ ಆರ್ಥಿಕ ಇಲಾಖೆ ಆಕ್ಷೇಪಿಸಿದ್ದು, ರಾಜ್ಯ ಸರ್ಕಾರವು ಪದೋನ್ನತಿ ನೀಡದಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಒಂದು ವರ್ಷದಿಂದ ಪದೋನ್ನತಿ ತಡೆಹಿಡಿಯಲಾಗಿದೆ.<br>ಆದುದರಿಂದ ಉಪಕುಲಸಚಿವ ಹುದ್ದೆಯ ವೇತನ ಶ್ರೇಣಿ ರೂ.74400-109600/- ಬದಲಿಗೆ ರೂ.67550-104600/- ಗಳನ್ನು ತಿದ್ದುಪಡಿ ಮಾಡಿರುವುದನ್ನು, ಸಭೆಯ ಗಮನಕ್ಕೆ ತಂದರು ಹಾಗೂ ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುವುದಿಲ್ಲವೆಂದು ತಿಳಿಸಿ ಇದನ್ನು ರಾಜ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ವಿದ್ಯಾ ವಿಷಯಕ ಸಭೆಯು ಒಪ್ಪಿಗೆ ಸೂಚಿಸುವಂತೆ ಕೋರಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದ ಮತ್ತು ಅಧ್ಯಾಪಕೇತರ ವೃಂದದ ನೇಮಕಾತಿ ಅಧಿನಿಯಮದಲ್ಲಿ ಉಪಕುಲಸಚಿವ ಹುದ್ದೆಯ ವೇತನ ಶ್ರೇಣಿಯನ್ನು ತಿದ್ದುಪಡಿಮಾಡಿ ಸಲ್ಲಿಸಿರುವ ಅಧಿನಿಯಮವನ್ನು ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದಿಸಿತು. |
| III.1 | ದಿನಾಂಕ 09-03-2023 ರಂದು ನಡೆದಂತಹ ಕಾನೂನು ನಿಕಾಯ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |
| | ಕಾನೂನು ನಿಕಾಯದ ಡೀನರು ಮಾತನಾಡಿ ಈಗಾಗಲೇ ಕುಲಸಚಿವರಿಗೆ ಮನವಿ ಸಲ್ಲಿಸಿದ್ದು ತಮಗೆ ಹೆಚ್ಚುವರಿಯಾಗಿ 20 ಕೊಠಡಿಗಳ ಅವಶ್ಯಕತೆ ಇರುವುದಾಗಿ ತಿಳಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ ಈಗಾಗಲೇ RUSA grants ನಲ್ಲಿ ರೂ. 1.5 ಕೋಟಿ ಅನುದಾನ ಅಭಿವೃದ್ಧಿಗಾಗಿ ನೀಡಿರುವುದಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ತಾವೇ ಬೇರೆ ರೀತಿಯಲ್ಲಿ ಆದಾಯವನ್ನು ಹೆಚ್ಚಿಸಿಕೊಂಡು ವಿಭಾಗವನ್ನು ಮುಂದುವರೆಸಬೇಕೆಂದು ಹೇಳಿದರು. ಈಗಾಗಲೇ ಸಾಕಷ್ಟು ಹಣವನ್ನು ನೀಡಲಾಗಿದೆ. ಒಂದೇ ವಿಭಾಗಕ್ಕೆ ಹಣವನ್ನು ನೀಡಲು ಸಾಧ್ಯವಿಲ್ಲ ಇನ್ನು ಹಲವಾರು ವಿಭಾಗಗಳು ಇವೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ದಿನಾಂಕ 09-03-2023ರಂದು ನಡೆದಂತಹ ಕಾನೂನು ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.2 | ದಿನಾಂಕ 10-03-2023 ರಂದು ನಡೆದ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| | ಪ್ರೊ. ಕೆ.ವಿ.ಅಯ್ಯಣ್ಣ ನವರು ಮಾತನಾಡಿ Urban and Regional Planning admission ಬಗ್ಗೆ ಸ್ಪಷ್ಟೀಕರಣ ಕೋರಿದರು.<br>ಇದಕ್ಕೆ ಉತ್ತರವಾಗಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ಡೀನರು ಮಾತನಾಡಿFirstly, M.Tech and Urban town planning course is recognized by Institute of town planning, New Delhi.<br>Secondly, we are following AICTE prescribed syllabus for B.E Civil, |

| | |
|---|---|
| | B.E planning, B.E Architecture and in their prescribed qualification there is M.A Social Science, M.A Economics, M.A Sociology and M.A Geography since these are interdisciplinary subjects there is a common frame work for all subjects we are continuing and in the entrance examination also we are following the same procedure ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ದಿನಾಂಕ 10-03-2023ರಂದು ನಡೆದಂತಹ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.3 | ದಿನಾಂಕ 10-03-2023 ರಂದು ನಡೆದ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| | ಶಿಕ್ಷಣ ನಿಕಾಯದ ಡೀನರು ಮಾತನಾಡಿ 2022-23 ಶೈಕ್ಷಣಿಕ ವರ್ಷದಲ್ಲಿ ಮೂರು ಯೋಗಿಕ್ ಸೈನ್ಸ್ ಪ್ರೋಗ್ರಾಂನ್ನು ಪ್ರಾರಂಭ ಮಾಡಲಾಗಿದೆ. PG Diploma in Yogic Science, Diploma in Yogic Science and Certificate Diploma in Yogic Science. ಈಗಾಗಲೇ PG Diploma in Yogic Science-18 ವಿದ್ಯಾರ್ಥಿಗಳು, Diploma in Yogic Science-12 ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದಿರುತ್ತಾರೆ. ಈ ಎರಡು ಪ್ರೋಗ್ರಾಂಗಳಿಗೆ walk in interview ಮುಖಾಂತರ ಅತಿಥಿ ಉಪನ್ಯಾಸಕರ ಸಂದರ್ಶನವನ್ನು ನಡೆಸಲಾಗಿದೆ. ಬೋಧಕೇತರ ಸಿಬ್ಬಂದಿಯನ್ನು ಸಹ ಒದಗಿಸಲಾಗಿದೆ. 16ನೇ ಜನವರಿ 2023 ತರಗತಿಗಳು ಪ್ರಾರಂಭವಾಗಬೇಕಿತ್ತು. ವಿದೇಶಿ ವಿದ್ಯಾರ್ಥಿಗಳು ಸಹ ಮುಂದೆ ಬಂದಿದ್ದಾರೆ ಈ ಕೋರ್ಸ್‌ಗಳಿಗೆ ಬಹಳ ಬೇಡಿಕೆಯಿದೆ ಇದು ಸ್ವಯಂ ಹಣಕಾಸು ಯೋಜನೆಯಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಯೋಗಿಕ್ ಸೈನ್ಸ್ ಪ್ರೋಗ್ರಾಂಗೆ ಹೆಚ್ಚಿನ ಬೇಡಿಕೆ ಇದ್ದು ಮೊದಲನೇ ವರ್ಷದಲ್ಲಿ ವಿಶ್ವವಿದ್ಯಾನಿಲಯದಿಂದ ಸಹಕಾರ ನೀಡಲಾಗುವುದು ನಂತರದ ಎರಡನೇ ವರ್ಷದಿಂದ ಸದರಿ ಪ್ರೋಗ್ರಾಂ Self Sustain ಆದಲ್ಲಿ ಮುಂದುವರೆಸಬಹುದಾಗಿದೆ ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ದಿನಾಂಕ 10-03-2023 ರಂದು ನಡೆದ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.4 | ದಿನಾಂಕ 09-03-2023 ರಂದು ನಡೆದ ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 09-03-2023 ರಂದು ನಡೆದ ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.5 | ದಿನಾಂಕ 15-03-2023 ರಂದು ನಡೆದ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 15-03-2023 ರಂದು ನಡೆದ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.6 | ದಿನಾಂಕ 15-03-2023 ರಂದು ನಡೆದ ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 15-03-2023 ರಂದು ನಡೆದ ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.7 | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | Specialized ಕೋರ್ಸ್‌ಗಳ ಅಡಿಯಲ್ಲಿ ರೆಗ್ಯುಲೇಷನ್ಸ್ ಮತ್ತು ಪಠ್ಯಕ್ರಮ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ 08 ಅಧ್ಯಯನ ಮಂಡಳಿಗಳು ಮಾಡಿರುವ ಶಿಫಾರಸ್ಸುಗಳನ್ನು ದಿನಾಂಕ 09.03.2023 ರಂದು ನಡೆದ ವಾಣಿಜ್ಯ ನಿಕಾಯದ ಸಭೆಯು ಅನುಮೋದನೆ ನೀಡಿರುವುದನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.<br>1. Diploma & PG Diploma in Health, Safety and Environment<br>a) The Panel of Examiners<br>2. B.Com (Financial Management)(UG)<br>a) The Panel of Examiners<br>3. B.Com. (Banking), B.Com (Hotel Management), B.Com (Digital Marketing)(UG)<br>a) The Panel of Examiners<br>4. BBA (Aviation Management)(UG)<br>5. BBA (Modeling and Fashion Management)(UG)<br>6. BBA (Communication and Media Management(UG)<br>7. B.Com (Financial Markets)(UG)<br>8. B.Com, Hons. (E-Commerce & Digital Marketing), B.Com.Hons (Finance & Investment), B.Com-Hons. (International Accounting and Finance (UG) |
| III.8 | Specialized ಕೋರ್ಸ್‌ಗಳ ಕಲಾ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | Specialized ಪ್ರೋಗ್ರಾಂ ಅಡಿಯಲ್ಲಿ ರೆಗ್ಯುಲೇಷನ್ಸ್ ಮತ್ತು ಪಠ್ಯಕ್ರಮ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧ್ಯಯನ ಮಂಡಳಿಗಳು ಮಾಡಿರುವ ಶಿಫಾರಸ್ಸುಗಳನ್ನು ದಿನಾಂಕ 15.03.2023 ರಂದು ನಡೆದ ಕಲಾ ನಿಕಾಯದ ಸಭೆಯು ಅನುಮೋದನೆ ನೀಡಿರುವ ವಿಷಯಗಳನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.<br>1. B.A.Hons. (Ancient Tibetan Language)<br>2. B.A.Hons. (Ancient Philosophy) |

| | |
|---|---|
| | 3. B.A.Hons. (Ancient Psychology)(UG)<br>4. M.A. in Theology (PG)<br>5. M.A. (Indian Christian Theology & Missiology) (PG) |
| III.೯ | Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರು ಮಾತನಾಡಿ Yogic Science ನ್ನು Science and Technology ನಿಕಾಯಕ್ಕೆ ಸೇರಿಸಬೇಕು. ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಕೂಡ ಇದಕ್ಕೆ ಮಹತ್ವವನ್ನು ನೀಡುತ್ತಾರೆ. ಹಿಂದೆ ಸದಸ್ಯರು ಚರ್ಚಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯವನ್ನು ಸೆಂಟ್ರಲ್ ವಿಶ್ವವಿದ್ಯಾನಿಲಯವಾಗಿ ಮಾಡಬೇಕು ಹಾಗೂ ಇದರ ಜೊತೆಗೆ Yogic Science ಸೇರಿಸಿ ರಾಷ್ಟ್ರ ಮಟ್ಟದಲ್ಲಿ ಹಾಗೂ ವಿಶ್ವದಾದ್ಯಂತ ಪ್ರಚಾರವಾಗಲು ಒಂದು ಪ್ರಸ್ತಾವನೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪನ್ಮೂಲ ಕೂಡ ಬರುತ್ತೆ. ಎಂ.ಎಸ್ಸಿ Yogic Science ಎಂದು ಯಾಕೆ ಮಾಡಬಾರದು. ಇದು ಈಗಾಗಲೇ ಚೆನ್ನೈನಲ್ಲಿ ಇದೆ. Yogic Science ಜೊತೆಗೆ Forensic Science ಮಾಡಿದರೆ ಅದನ್ನು ಕೂಡ ದೊಡ್ಡ ಮಟ್ಟದಲ್ಲಿ ಬೆಳಸಬಹುದು ಎಂದು ತಮ್ಮ ಅನಿಸಿಕೆಯನ್ನು ಹಾಗೂ ಸಲಹೆಯನ್ನು ಶೈಕ್ಷಣಿಕ ಸಭೆಗೆ ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ NEP ನಲ್ಲಿ Compulsory common paper ಮಾಡಿದ್ದಾರೆ. ವಿಜ್ಞಾನ, ಕಲಾ ಅಥವಾ ವಾಣಿಜ್ಯ ವಿದ್ಯಾರ್ಥಿಗಳು ಯಾವ ಪತ್ರಿಕೆಯನ್ನಾದರೂ ಅಧ್ಯಯನ ಮಾಡಬಹುದು ಹಾಗೂ ಇದರ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಅದನ್ನು ನೀಡಿದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. |
| ತೀರ್ಮಾನ | Specialized ಪ್ರೋಗ್ರಾಂ ಅಡಿಯಲ್ಲಿ ರೆಗ್ಯುಲೇಷನ್ಸ್ ಮತ್ತು ಪಠ್ಯಕ್ರಮ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ 07 ಅಧ್ಯಯನ ಮಂಡಳಿಗಳು ಮಾಡಿರುವ ಶಿಫಾರಸ್ಸುಗಳನ್ನು ದಿನಾಂಕ 15.03.2023 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯು ಅನುಮೋದನೆ ನೀಡಿರುವ ವಿಷಯಗಳನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.<br>1. B.Sc. Optometry (UG)<br>2. BCA Internet of Things (UG)<br>3. BCA (Cloud Computing and Digital Science)(UG)<br>4. M.Sc. (Clinical Embryology and Pre Implantation Genetics)(PG)<br>5. B.Sc.(Hons) Agriculture/B.Sc.(Hons) Horticulture (UG)<br>6. M.Sc.(Agri.)Agronomy, M.Sc. (Agri.) Genetics and Plant Breeding and M.Sc. (Agri.) Entomology)(PG)<br>7. B.Sc. Hons. (Data Science & Artificial Intelligence)(UG) |

ಇತರೆ ವಿಷಯಗಳು:

1. ಶ್ರೀ.ಸಿ.ಎನ್.ಮಂಜೇಗೌಡ, ಎಂಎಲ್‌ಸಿ ಅವರು ಮಾತನಾಡಿ, ಮಾನಸಗಂಗೋತ್ರಿಯ ಎಲ್ಲಾ ಕಟ್ಟಡಗಳಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಲು ವಿದ್ಯುಚ್ಛಕ್ತಿಗಾಗಿ ಹಣ ವ್ಯಯಿಸುವುದು ಉಳಿತಾಯವಾಗುತ್ತದೆ ಎಂದು ಸಲಹೆ ನೀಡಿದರು. ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ ಹಲವು ಕಟ್ಟಡಗಳನ್ನು ನಿರ್ಮಾಣ ಮಾಡಿದ್ದು, ಸಂಬಂಧಪಟ್ಟ ವಿಭಾಗಗಳಿಗೆ ಹಸ್ತಾಂತರಿಸಿಲ್ಲದಿರುವುದನ್ನು ಸಭೆಯ ಗಮನಕ್ಕೆ ತಂದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, ಈಗಷ್ಟೇ ಕುಲಪತಿಯವರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದು, ತಾವು ಪರಿಶೀಲನೆ ನಡೆಸಿ ಮಾಹಿತಿಯನ್ನು ನೀಡಲಾಗುವುದೆಂದು ತಿಳಿಸಿದರು.

2. ಶ್ರೀ.ಸಿ.ಎನ್.ಮಂಜೇಗೌಡ, ಎಂಎಲ್‌ಸಿ ರವರು ಮಾತನಾಡಿ, ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿಗೊಳಿಸುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಹತ್ತು ಕೋಟಿ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ನೀಡುವ ಕುರಿತು ವಿಷಯವನ್ನು ಪ್ರಸ್ತಾಪಿಸಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಮುಂದುವರೆದು, ವಿಶ್ವವಿದ್ಯಾನಿಲಯವು ಸದರಿ ಆಯವ್ಯಯದಲ್ಲಿ ಪ್ರಸ್ತಾಪನೆ ಮಾಡಿಲ್ಲದೆ ಇರುವುದರಿಂದ, ವಿಶ್ವವಿದ್ಯಾನಿಲಯವು ಮನವಿ ಪತ್ರ ಸಲ್ಲಿಸಿದ್ದಲ್ಲಿ ತಾವು ಖುದ್ದಾಗಿ ಕಾರ್ಯ ಪ್ರವೃತ್ತರಾಗುತ್ತೇವೆಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಹಸಿರುಭರಿತವಾಗಿದ್ದು, ಇಲ್ಲಿ ಇರುವ ಕಿರು ಅರಣ್ಯವನ್ನು ಅಭಿವೃದ್ಧಿಪಡಿಸಲು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು.

3. ಕುಲಸಚಿವರು ಮಾತನಾಡಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದವರು Green Space Development ಅನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರ ಸಹಯೋಗದೊಂದಿಗೆ ಮಾಡಲು ಅನುವು ಮಾಡಿಕೊಡುವಂತೆ ತಾವು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರಿಗೆ ಮನವಿ ಸಲ್ಲಿಸುತ್ತೇವೆಂದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ.ಸಿ.ಎನ್.ಮಂಜೇಗೌಡ, ಎಂಎಲ್‌ಸಿ ಸಹಕಾರ ಅಗತ್ಯವೆಂದು ತಿಳಿಸಿದರು.

4. ಶ್ರೀ.ಟಿ.ನಾಗರಾಜುರವರು ಮಾತನಾಡಿ, ಕುಲಪತಿಗಳ ವಿಶೇಷಾಧಿಕಾರಿಗಳಾಗಿ ವಿಶ್ವವಿದ್ಯಾನಿಲಯದವರನ್ನೇ ನಿಯೋಜಿಸಬೇಕೆಂದು ಸಲಹೆ ನೀಡಿದರು.

5. ಮಾನ್ಯ ಕುಲಪತಿಯವರು ವಿಭಾಗದವರು ಏಕರೂಪವಾಗಿ ಕ್ರೆಡಿಟ್ ಮಾದರಿಯನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಅಂತಿಮವಾಗಿ, ಮಾನ್ಯ ಕುಲಸಚಿವರು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಎಲ್ಲಾ ಶಿಕ್ಷಣಮಂಡಳಿ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಸಹಿ/–** | **ಸಹಿ/–** |
| **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಹಾಗೂ ಅಧ್ಯಕ್ಷರು** |